KATK010048602022

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ವಿಶೇಷ ಮೊಕದ್ದಮೆ.468/2022</u>**

ಪ್ರಾ.ಸಾ. ಃ **2**

ದೋ.ಸಾ. ಃ **8**

ದಿ.**14.02.2025**

ಹೆಸರು ಃ ರವೀಶ್ ಚಂದ್ರ ಎಸ್.

ತಂದೆಯ ಹೆಸರು ಃ ಎಂ.ಶಿವರುದ್ರಯ್ಯ

ವಯಸ್ಸು ಃ **43** ವರ್ಷ

ಉದ್ಯೋಗ ಃ ಕಾನೂನು ಮಾಪನ ಶಾಸ್ತ್ರ ನಿರೀಕ್ಷಕರು, ತುಮಕೂರು-**1** ಉಪ ವಿಭಾಗ, ತುಮಕೂರು

ವಾಸಸ್ಥಳ ಃ ತುಮಕೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

1. ಆಗಸ್ಟ್ 2018 ರಿಂದ ನಾನು ತುಮಕೂರು ಉಪ ವಿಭಾಗ-1 ರಲ್ಲಿ ಕಾನೂನು ಮಾಪನ ಶಾಸ್ತ್ರ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿ.**17.06.2022** ರಂದು ತುಮಕೂರಿನ **3** ನೇ ಅಧಿಕ ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಕ್ಕೆ ಗಾಂಜಾ ಸೊಪ್ಪು, ಕಡ್ಡಿಗಳನ್ನು ಮತ್ತು ಎಂಡಿಎಂಎ ಪೌಡರನ್ನು ತೂಕ ಮಾಡುವ ಸಲುವಾಗಿ ನನ್ನ ಮೇಲಧಿಕಾರಿಗಳು ಕೊಟ್ಟ ನಿರ್ದೇಶನದಂತೆ ಸಂಜೆ **5.00** ಗಂಟೆಗೆ ಬಂದು ನಾನು ಅಲ್ಲಿ ಹಾಜರುಪಡಿಸಿದ ಗಾಂಜಾ ಸೊಪ್ಪು, ಕಡ್ಡಿ ಮತ್ತು ಎಂಡಿಎಂಎ ಪೌಡರುಗಳನ್ನು ತೂಕ ಮಾಡಿ ಹೇಳಿರುತ್ತೇನೆ. ತೂಕ ಮಾಡಿದಾಗ ಗಾಂಜಾ ಸೊಪ್ಪು ಚೀಲದ ಸಮೇತ **7** ಕೆಜಿ **110** ಗ್ರಾಂ ಇದ್ದು ಅದರಿಂದ **50** ಗ್ರಾಂ ಗಾಂಜಾ ಸೊಪ್ಪನ್ನು ಸ್ಯಾಂಪಲ್ ಗಾಗಿ ತೆಗೆದು ಬಟ್ಟೆ

ಚೀಲದಲ್ಲಿ ಹಾಕಿ, ಬಾಯಿ ಕಟ್ಟಿ ಸಿ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು. ಉಳಿದ 7 ಕೆಜಿ 60 ಗ್ರಾಂ ಗಾಂಜಾವನ್ನು ಬಿಳಿ ಚೀಲದಲ್ಲಿ ಹಾಕಿ, ಬಾಯಿ ಕಟ್ಟಿ ಸಿ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು. ಅದೇ ರೀತಿ ಇನ್ನೊಂದು ಪ್ಯಾಕೇಟ್ ನಲ್ಲಿದ್ದ 2 ಕೆಜಿ 882 ಗ್ರಾಂ ಗಾಂಜಾ ಸೊಪ್ಪು ಮತ್ತು ಕಡ್ಡಿಯನ್ನು ತೂಕ ಮಾಡಿ, ಅದರಿಂದ 50 ಗ್ರಾಂ ಗಾಂಜಾ ಸೊಪ್ಪನ್ನು ಸ್ಯಾಂಪಲ್ ಗಾಗಿ ತೆಗೆದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಬಾಯಿ ಕಟ್ಟಿ ಸಿ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು. ಉಳಿದ 2 ಕೆಜಿ 832 ಗ್ರಾಂ ಗಾಂಜಾ ಸೊಪ್ಪು ಮತ್ತು ಕಡ್ಡಿಯನ್ನು ತೂಕ ಮಾಡಿ, ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಬಾಯಿ ಕಟ್ಟಿ ಸಿ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು. ನಂತರ ಎಂಡಿಎಂಎ ಕ್ರಿಸ್ಟಲ್ ಪುಡಿಯನ್ನು ತೂಕ ಮಾಡಿದಾಗ 15.05 ಗ್ರಾಂ ಇತ್ತು. ಎಂಡಿಎಂಎ ಕ್ರಿಸ್ಟಲ್ ಪುಡಿ 4.05 ಗ್ರಾಂ ಇತ್ತು. ಅದನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಬಾಯಿ ಕಟ್ಟಿ ಸಿ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು. ಇನ್ವೆಂಟರಿ ಕ್ರಮವನ್ನು ಸಂಜೆ 5.30-6.00 ಗಂಟೆಯವರೆಗೆ ನಡೆಸಲಾಯಿತು. ಆ ಇನ್ವೆಂಟರಿ ಗೆ ನಾನು ಸಹಿ ಮಾಡಿದ್ದು ಅದನ್ನು ನಿಶಾನೆ ಪಿ15 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ15(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ನಿಶಾನೆ ಪಿ16 ರಿಂದ 19 ಎಂದು ಗುರುತಿಸಲಾಯಿತು. ಫೋಟೋಗಳು ಇರುವ ಸಿಡಿಯನ್ನು ಸಿಡಿ ಪ್ಲೇಯರ್ ಗೆ ಪ್ಲೇ ಮಾಡಿ ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಒಪ್ಪಿಕೊಂಡಿದ್ದರಿಂದ ಸಿಡಿಯನ್ನು ನಿಶಾನೆ ಪಿ20 ಎಂದು ಗುರುತಿಸಲಾಯಿತು. 2 ಗಾಂಜಾದ ಪ್ಯಾಕೇಟ್ ಗಳನ್ನು ಗುರುತಿಸಿ, ಅವುಗಳಲ್ಲಿ ನನ್ನ ಸಹಿ ಇದೆ ಎಂದು ಹೇಳಿದ್ದು, ಮೊಹರು ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅವುಗಳನ್ನು ಮು ಮಾ 2 ಮತ್ತು 3 ಎಂದು ಗುರುತಿಸಲಾಯಿತು. ಒಂದು ಎಂಡಿಎಂಎ ಪ್ಯಾಕೇಟನ್ನು ನೋಡಿ ಅದರಲ್ಲಿ ತನ್ನ ಸಹಿ ಇದೆ ಎಂದು ಸಾಕ್ಷಿ ಹೇಳಿದ್ದು, ಅದನ್ನು ತೆರೆದು ತೋರಿಸಲಾಗಿ ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ಮು ಮಾ 4 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಶ್ರೀ.ಡಿ.ಎ.ಜಗದೀಶ್ ವಕೀಲರಿಂದ 1 ಮತ್ತು 2 ನೇ ಆರೋಪಿತರ ಪರವಾಗಿಃ</u>**

**3.** ಪೋಲೀಸರು ನನ್ನನ್ನು ಕರೆದಿದ್ದಕ್ಕೆ ನಾನು ಕೋರ್ಟಿಗೆ ಬಂದಿದ್ದೆನು. ಪ್ರಕರಣದ ಕ್ರೈಮ್ ನಂಬರ್ ಗೊತ್ತಿಲ್ಲ. ನನ್ನ ಜೊತೆಗೆ ಇಬ್ಬರು ಪಂಚರು ಬಂದಿದ್ದರು. ಅವರು ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧಿಕಾರಿಗಳು. ಪಿಎಸ್ಐ ಶಮೀನ್ ಇದ್ದರು. ಪೋಲೀಸರು ಹಾಜರು ಮಾಡಿದ ಪ್ಯಾಕೇಟ್ ಗಳನ್ನು ಮೊದಲಿಗೆ ತೂಕ ಮಾಡಿ, ನಂತರ ಅವುಗಳನ್ನು ತೆರೆದು 50 ಗ್ರಾಂ ಸ್ಯಾಂಪಲನ್ನು ಪ್ರತ್ಯೇಕವಾಗಿ ತೆಗೆದು ಪ್ಯಾಕ್ ಮಾಡಿದರು. ಡ್ರಗ್ ಡಿಸ್ಪೋಸಲ್ ಕಮಿಟಿಗೆ ಹೋಗುವ ಪತ್ರಕ್ಕೆ ನಾನು ಸಹಿ ಮಾಡಿಲ್ಲ. ಆ ಸೀಲನ್ನು ನನಗೆ ಕೊಟ್ಟಿಲ್ಲ. ನೋವಾ ಡಿಜಿ ತೂಕದ ಯಂತ್ರ ಕೊಂಡುಹೋಗಿದ್ದೆ. ಅದನ್ನು ಇನ್ವೆಂಟರಿಯಲ್ಲಿ ಬರೆದಿದ್ದಾರೋ ಎಂದು ಗೊತ್ತಿಲ್ಲ. ನಾನು ಹೇಳುವಂತಹ ಇನ್ವೆಂಟರಿ ಪ್ರಕ್ರಿಯೆ ನನ್ನ ಸಮಕ್ಷಮ ನಡೆದಿಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ.ಆರ್.ವಿ.ದೊಡ್ಡಶಾಣಯ್ಯ ವಕೀಲರಿಂದ 3 ನೇ ಆರೋಪಿತನ ಪರವಾಗಿಃ</u>**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಃ ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು